ಶ್ರೀ ಕೆ. ಪಿ. ರೇವಣ್ಣ ಸಿದ್ದಪ್ಪ.—ಬೆಳಿಗ್ಗೆ ಅದರ ಇಬರಿದು ಒಂದೊಂದು ಅಜ್ಜಿ. ಇಂತಿಂಥಕಡೆ ಅಭಾವವಿದೆ ಎಂಬುದನ್ನು ಇವರು ಪೂರ್ಣವಾಗಿ ಅರ್ಥಮಾಡಿಕೊಳ್ಳುವುದಕ್ಕೆ ಇವರಿಗೆ ಇನ್ನೆಷ್ಟು ಕಾಲ ಬೇಕು ? ದೇಶದ ಜನ ಯಾವುದನ್ನು ಆಳವಡಿಸಬೇಕೆಂದು ಇವರು ಹೇಳುವುದಕ್ಕಾಗುತ್ತದೆ ?

Mr. SPEAKER.—So many ideas are mixed up. The Hon'ble Member may reframe the question.

ಶ್ರೀ ಸಿದ್ದಯ್ಯ ಕಾಶೀಮಠ.—ಹೋಟಲುಗಳ ಮಾಲೀಕರಿಗೆ ಅವರು ಮಾರಾಟ ತೆರಿಗೆ ಕೊಡುವ ಒಂದು ಆಧಾರದ ಮೇಲೆ ಕೊಡಬೇಕು ಎಂಬುದಾಗಿ ಜಿಲ್ಲಾಧಿಕಾರಿಗಳಿಗೆ ಸೂಚನೆಯನ್ನೇನೋ ಕೊಟ್ಟಿದ್ದೀರಿ. ಆದರೆ ಹಾಸ್ಟಲುಗಳನ್ನು ನಡೆಸುವವರು ಮಾರಾಟ ತೆರಿಗೆಯನ್ನು ಕೊಡದೇ ಇರುವುದರಿಂದ ಅಂತಹವರಿಗೆ ಯಾವ ರೀತಿ ಕೊಡುವುದಕ್ಕೆ ಪ್ರೊಟೆಕ್ಷನ್ ಮಾಡುತ್ತೀರಿ ?

ಶ್ರೀ ಎಂ. ವಿ. ಕೃಷ್ಣಪ್ಪ.—ಹಾಸ್ಟಲು ಹುಡುಗರಿಗೆ ಬಹಳ ರಿಯಾಯತಿಯಿಂದ ಕೊಡಬೇಕೆಂದು ಸೂಚನೆ ಕೊಟ್ಟಿದೆ. ಹುಡುಗರು ಗಲಾಟೆ ಮಾಡಿದರೆ ಕಷ್ಟವೆಂದು ಓದುವ ಹುಡುಗರಿಗೆ ವ್ಯವಸ್ಥೆ ನರಿಯಾಗಿರಬೇಕೆಂದು ಮತ್ತು ಅವರ ರಿಜಿಸ್ಟರ್‌ಮೆಂಟ್ ಬಹಳ ಕಡಿಮೆ ಇರುವುದರಿಂದ ಅದರಲ್ಲೂ ಒಂದೊಮ್ಮ ಊರಿಗೆ ಕೇವಲ 7-8 ಹಾಸ್ಟಲುಗಳು ಇರುವುದರಿಂದ ಅಲ್ಲಿರತಕ್ಕ ಹುಡುಗರಿಗೆ ಒಳ್ಳೆಯ ಅಕ್ಕಿಯನ್ನು ಸಾಧ್ಯವಾದಷ್ಟು ಬೇಗ ಕೊಡಿ ಎಂಬುದಾಗಿ ಹೇಳಿದ್ದೇವೆ.

ಬಿ. ಭಾನ್ಕರಶೆಟ್ಟಿ.—ಸ್ವಾಮಿ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಈಗ 3-4 ತಿಂಗಳುಗಳಿಂದಲೂ ಅಕ್ಕಿಯ ಅಭಾವ ಜಾಸ್ತಿಯಾಗಿದೆ, ಹೀಗಿರುವಾಗ ಅಲ್ಲಿಂದ ಬೇರೆ ಕಡೆಗೆ ಬತ್ತ ಮತ್ತು ಅಕ್ಕಿ ಹೋಗುತ್ತಿದೆ. ಇದನ್ನು ತಡೆಗಟ್ಟುವ ಹಾಗೆ ಸರ್ಕಾರದವರು ಏನಾದರೂ ಒಂದು ಏರ್ಪಾಡು ಮಾಡಬೇಕು ನಮ್ಮ ಜಿಲ್ಲೆಯಲ್ಲಿ ಅಕ್ಕಿಯಿಲ್ಲದೆ ಜನಗಳು ಬಹಳ ಕಷ್ಟಪಡುತ್ತಿದ್ದಾರೆ. ಒಂದು ಕೆ.ಜಿ. ಅಕ್ಕಿಗೆ 1 ರೂಪಾಯಿ 10 ನಯಾಪೈಸಾ ಆಗಿದೆ. ಬೇರೆ ಕಡೆಯಿಂದಲಾದರೂ ಅಕ್ಕಿಯನ್ನು ತರೋಣ ಎಂದರೆ ಒಂದು ಡಿಸ್ಟ್ರಿಕ್ಟ್‌ನಿಂದ ಇನ್ನೊಂದು ಡಿಸ್ಟ್ರಿಕ್ಟ್‌ಗೆ ತರುವ ಹಾಗೆ ಇಲ್ಲ. ಇದರಿಂದ ಅಲ್ಲಿನ ಜನಗಳಿಗೆ ಬಹಳ ತೊಂದರೆ ಆಗಿದೆ, ಆದ್ದರಿಂದ ಈ ಬಗ್ಗೆ ಸರ್ಕಾರದವರು ಏನಾದರೂ ಒಂದು ಏರ್ಪಾಟನ್ನು ಮಾಡುತ್ತೀರಾ ?

ಶ್ರೀ ಎಂ. ವಿ. ಕೃಷ್ಣಪ್ಪ.—ಈ ಪ್ರಶ್ನೆಗೂ ಅದಕ್ಕೂ ಸಂಬಂಧವಿಲ್ಲ. ಅದರೂ ಸಹ ನಾನು ಒಂದು ವಿಷಯವನ್ನು ಈ ಮಾನ್ಯ ಸಭೆಯವರ ಗಮನಕ್ಕೆ ತರಬೇಕೆಂದಿದ್ದೇನೆ. ಅದೇನೆಂದರೆ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಆಹಾರದ ವಿಷಯದಲ್ಲಿ ಒಂದು ನರಿಯಾದ ವ್ಯವಸ್ಥೆಯನ್ನು ಮಾಡಬೇಕೆಂದಿದ್ದೇವೆ. ಮಂಗಳೂರಿನಲ್ಲಿ ಈ ತಿಂಗಳು 8-10ನೇ ತಾರೀಖಿನ ವೇಳೆಗೆ ಇನ್‌ಫಾರ್ಮಲ್ ರೇಷನಿಂಗ್ ಪದ್ಧತಿಯನ್ನು ಜಾರಿಗೆ ತರಬೇಕೆಂದಿದ್ದೇವೆ. ಒಂದು ತರಹ ರೇಷನಿಂಗ್ ಕಾರ್ಡ್‌ಗಳ ಮೂಲಕ ಅಲ್ಲಿನ ಜನರಿಗೆ ರೇಷನ್ ಕೊಡುವುದಕ್ಕೆ ಏರ್ಪಾಟು ಮಾಡುತ್ತಿದ್ದೇವೆ.

———

Works sanctioned under Minor Irrigation Scheme in Krishnarajpet Taluk

*Q.—300. Sri N. NANJE GOWDA (Krishnarajpet).—

Will the Government be pleased to state :—

(*a*) the number of works sanctioned under the minor irrigation scheme in Krishnarajapet Taluk from January 1964 to December 1964 ;

(*b*) out of them the number of works for which provision has been made in the budget ; the works for which provision has not been made in the budget ;

(*c*) the date on which estimates of these works were prepared (hobli-wise information may be supplied) ?

A.—Sri ALUR HANUMANTHAPPA (Deputy Minister for Minor Irrigation).—

(*a*) One.

(*b*) One ; Reply to the latter part does not arise.

(*c*) 6th December 1963—Bookinakere Hobli—1.

ಶ್ರೀ ಎನ್. ನಂಜೇಗೌಡ.—ಸ್ವಾಮಿ, ನನ್ನ ಪ್ರಶ್ನೆ ಸ್ವಲ್ಪ ಬದಲಾವಣೆಯಾಗಿದೆ. ನಾನು ನನ್ನ ಪ್ರಶ್ನೆಯಲ್ಲಿ ಮೈನೂರು ಕ್ಷೇತ್ರಕ್ಕೆ ಸಂಬಂಧಪಟ್ಟ ಹಾಗೆ ಅಂಕಿ ಅಂಶಗಳನ್ನು ಕೇಳಿದ್ದೆ. ಆದರೆ ಅದು ತಾಲ್ಲೂಕಿಗೆ ಕನ್ವರ್ಟ್ ಆಗಿದೆ.

ಶ್ರೀ ಅಧ್ಯಕ್ಷರು.—ಮಾನ್ಯ ಸದಸ್ಯರು ಕೇಳಿದ ಪ್ರಶ್ನೆ ಬಹಳ ಡೀಟೈಲ್ಡ್ ಆಯಿತು, ಆದ್ದರಿಂದ ಅದನ್ನು ನಾನು ಸ್ವಲ್ಪ ಕಡಮೆ ಮಾಡಿದ್ದೇನೆ. ಬೇಕಾದರೆ ಇನ್ನೊಂದು ಪ್ರಶ್ನೆ ಹಾಕಿ.

ಶ್ರೀ ಎನ್. ನಂಜೇಗೌಡ.—ಸ್ವಾಮಿ, ನನ್ನ ಪ್ರಶ್ನೆಗೆ ಕೊಟ್ಟಿರುವ ಉತ್ತರದಲ್ಲಿ 1964ನೇ ಇಸವಿ ಜನವರಿ ತಿಂಗಳಿನಿಂದ ಡಿಸೆಂಬರ್ ತಿಂಗಳವರೆಗೆ ಕೃಷ್ಣರಾಜಪೇಟೆ ತಾಲ್ಲೂಕಿನಲ್ಲಿ ನಣ್ಣ ನೀರಾವರಿ ಯೋಜನೆಗೆ ಸಂಬಂಧಪಟ್ಟ ಹಾಗೆ ಒಂದು ಕೆಲಸ ಸಾಂಕ್ಷನ್ ಆಗಿದೆ ಎಂದು ಹೇಳಿದ್ದೀರಿ ಆ ಕೆಲಸ ಯಾವುದು?

† ಶ್ರೀ ಆಲೂರು ಹನುಮಂತಪ್ಪ.—ಅದು ಎಕ್ಸ್‌ಟೆಂಡಿಂಗ್ ರಾಯನ ಅಣೆ ಚಾನಲ್.

ಶ್ರೀ ಎನ್. ನಂಜೇಗೌಡ.—ಅದು ಎಷ್ಟು ರೂಪಾಯಿಗಳ ಎಸ್ಟಿಮೇಟು ?

ಶ್ರೀ ಆಲೂರು ಹನುಮಂತಪ್ಪ.—17 ಸಾವಿರ ರೂಪಾಯಿಗಳು.

ಶ್ರೀ ಎಚ್. ಡಿ ದೇವೇಗೌಡ.—ಆ ತಾಲ್ಲೂಕಿನಲ್ಲಿ ಒಂದು ಕೆಲಸವನ್ನು ಸಾಂಕ್ಷನ್ ಮಾಡಿದ್ದೇವೆಂದು ಹೇಳಿದ್ದೀರಿ, ಹಾಗಾದರೆ ಆ ಸಬ್ ಡಿವಿಜನ್‌ನಲ್ಲಿರತಕ್ಕ ಅಧಿಕಾರಿಗಳು ಎಷ್ಟು ಜನ, ಅವರಿಗೆ ಕೊಡತಕ್ಕ ಸಂಬಳ ಎಷ್ಟು, ಈಗ ಸಾಂಕ್ಷನ್ ಆಗಿರುವ ಕೆಲಸವನ್ನು ಮಾಡುವುದಕ್ಕೆ ಎಷ್ಟು ಜನ ಅಧಿಕಾರಿಗಳು ಬೇಕು ?

ಶ್ರೀ ಆಲೂರು ಹನುಮಂತಪ್ಪ.—ಆ ತಾಲ್ಲೂಕಿನಲ್ಲಿ ಸುಮಾರು 23,38,000 ರೂಪಾಯಿಗಳ ವರ್ಕ್ ರೋಡು ಇದೆ.

ಶ್ರೀ ಕೆ. ಪಿ. ರೇವಣ್ಣ ಸಿದ್ದಪ್ಪ.—ವರ್ಕ್ ರೋಡ್ ಎಷ್ಟು ಇದೆ, ಎಷ್ಟಾಬ್ಲಿಷ್‌ಮೆಂಟ್ ಖರ್ಚು ಎಷ್ಟಿದೆ ?

ಶ್ರೀ ಆಲೂರು ಹನುಮಂತಪ್ಪ.—ಮೈನರ್ ಇರಿಗೇಷನ್ನಿಗೆ ಸಂಬಂಧಪಟ್ಟ ಹಾಗೆ 23,38,000 ರೂಪಾಯಿಗಳ ಕೆಲಸ ಇದೆ, ಅದರ ಜೊತೆಗೆ ರಸ್ತೆಯ ಕೆಲಸ ಮತ್ತು ಬಿಲ್ಡಿಂಗ್‌ಗಳ ಕೆಲಸ ಇದೆಯಾ ಇದೆ. ಸಬ್ ಡಿವಿಜನ್‌ನಲ್ಲಿ ಕೆಲಸ ಇಲ್ಲದೆ ಇರುವ ಪ್ರಶ್ನೆಯೇ ಇಲ್ಲ.

ಶ್ರೀ ಎಚ್. ಡಿ. ದೇವೇಗೌಡ —23,38,000 ರೂಪಾಯಿಗಳ ವರ್ಕ್ ರೋಡು ಇದೆಯೆಂದು ಹೇಳಿದ್ದೀರಿ, ಹಾಗಾದರೆ ಆ ಕೆಲಸಗಳ ಪ್ರೊಗ್ರೆಸ್ ಹೇಳುತ್ತೀರಾ ?

ಶ್ರೀ ಆಲೂರು ಹನುಮಂತಪ್ಪ.—ಬೇರೆ ಪ್ರಶ್ನೆ ಹಾಕಿದರೆ ಅದನ್ನು ತಿಳಿಸುತ್ತೇನೆ.

ಶ್ರೀ ಎನ್. ನಂಜೇಗೌಡ.—ಸ್ವಾಮಿ, ಈ ನಣ್ಣ ನೀರಾವರಿ ಯೋಜನೆಗೆ ಸಂಬಂಧಪಟ್ಟ ಹಾಗೆ ಅಂದಾಜುಗಳನ್ನು ನಮ್ಮ ರಾಜ್ಯದಲ್ಲಿ ಹೋಬಳಿವಾರು ತಯಾರು ಮಾಡಿದ್ದೀರಾ ?

ಶ್ರೀ ಆಲೂರು ಹನುಮಂತಪ್ಪ.—ಅದು ಹೋಬಳಿವಾರು ಅಂದಾಜು ತಯಾರಾಗಿಲ್ಲ.

ಶ್ರೀ ಅಂದಾನಯ್ಯ.—ಹೊಸ ಕೆಲಸಗಳನ್ನು ಒಂದನ್ನೂ ಶುರು ಮಾಡುವ ಹಾಗಿಲ್ಲ, ಹಳೆಯ ಕೆಲಸಗಳನ್ನು ತೆಗೆದುಕೊಳ್ಳಬೇಕಾದರೆ 13 ಕೋಟಿ ರೂಪಾಯಿಗಳು ಬೇಕು, ಅದಕ್ಕೂ ದುಡ್ಡಿಲ್ಲ, ಮತ್ತು ಸಿವಿಲ್ ಸಿಕ್ಕುವುದಿಲ್ಲ, ಈ ಎರಡೂ ಕಾರಣಗಳಿಂದ ಸಬ್ ಡಿವಿಜನ್ ಎತಕ್ಕೆ ಮೈಂಡ್ ಅಪ್ ಮಾಡಬಾರದು ?

Mr. SPEAKER.—Winding up a department of the government does not arise in a supplementary.

ಶ್ರೀ ಎನ್. ನಂಜೇಗೌಡ.—ಕೃಷ್ಣರಾಜಪೇಟೆ ತಾಲ್ಲೂಕಿನಲ್ಲಿ ಪೆಂಡಿಂಗ್ ವರ್ಕ್ ಎಷ್ಟು ಇವೆ?

ಶ್ರೀ ಆಲೂರು ಹನುಮಂತಪ್ಪ.—ಬೇರೆ ಪ್ರಶ್ನೆ ಹಾಕಿದರೆ ಅದಕ್ಕೆ ಉತ್ತರವನ್ನು ಹೇಳುತ್ತೇನೆ.

ಶ್ರೀ ಎಚ್. ಆರ್. ಕೇಶವಮೂರ್ತಿ.—ಸ್ವಾಮಿ, ಕೆರೆ ಕಟ್ಟೆಗಳ ಕೆಲಸಗಳನ್ನು ತೆಗೆದುಕೊಳ್ಳಬೇಕಾದರೆ ಯಾವ ಫಾರಿನ್ ಎಕ್ಸ್‌ಚೇಂಜ್ ಬೇಕಾಗಿಲ್ಲ, ಆದರೆ ಸರ್ಕಾರದವರು ಆ ಕೆಲಸಗಳನ್ನು ತೆಗೆದುಕೊಳ್ಳುವುದಕ್ಕೆ ಹಿಂಜರಿಯುತ್ತಿದ್ದಾರೆ, ಇವೊತ್ತಿನ ದಿವಸ ನಮ್ಮ ದೇಶದಲ್ಲಿ ಆಹಾರದ ಪರಿಸ್ಥಿತಿಯನ್ನು ನೋಡಿದರೆ ಜನಗಳು ಉಪವಾಸ ಮಾಡುವಂತಹ ಪರಿಸ್ಥಿತಿ ಇದೆ. ಇವರು ಇದೇ ಧೋರಣೆಯನ್ನು ಅನುಸರಿಸುತ್ತಾ ಹೋದರೆ ಇವರು ಮುಂದಿನ ಎಲೆಕ್ಷನ್ನಿನಲ್ಲಿ ಬರುವುದಕ್ಕೆ ಸಾಧ್ಯವೆ ದಯವಿಟ್ಟು ತಿಳಿಸಿ ?

†Indicates that the remarks or speeches have not been revised by the member concerned.

Mr. SPEAKER.—The question is disallowed.

ಶ್ರೀ ಕೆ. ಪಿ. ರೇವಣಸಿದ್ದಪ್ಪ.—ಆಹಾರದ ಪರಿಸ್ಥಿತಿ ಕಷ್ಟ ಇರುವಾಗ ಸಣ್ಣ ನೀರಾವರಿ ಯೋಜನೆಗಳಿಗೆ ಹೆಚ್ಚಿನ ಪ್ರಾಶಸ್ತ್ಯ ಕೊಡಬೇಕೆಂದಿದೆ, ಹೀಗಿರುವಾಗ ತಾವು ಸಣ್ಣ ನೀರಾವರಿ ಯೋಜನೆಗ ಗಿ ಎಷ್ಟು ಹಣವನ್ನು ಖರ್ಚು ಮಾಡಿದ್ದೀರಿ, ಕೇಂದ್ರ ಸರ್ಕಾರದವರು ಈ ಬಾಬಿಗೆ ಎಷ್ಟು ಹಣವನ್ನು ಕೊಟ್ಟಿದ್ದಾರೆ, ಅವರು ಎಷ್ಟು ಹಣವನ್ನು ಕೊಡುತ್ತೇವೆಂದು ಒಪ್ಪಿಕೊಂಡಿದ್ದಾರೆ!

ಶ್ರೀ ಆಲೂರು ಹನುಮಂತಪ್ಪ.—ಈ ವರ್ಷ ನಾವು ಸಣ್ಣ ನೀರಾವರಿಗೆ ಸಂಬಂಧಪಟ್ಟ ಹಾಗೆ ಪಬ್ಲಿಕ್ ವರ್ಕ್ಸ್ ಇಲಾಖೆಯ ಮುಖಾಂತರ 4 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಕೇಂದ್ರ ಸರ್ಕಾರದಿಂದ ನಮಗೆ ಮೂರು ಕೋಟಿ ಎಪ್ಪತ್ತೈದು ಲಕ್ಷ ರೂಪಾಯಿಗಳು ಬಂದಿದೆ.

ಶ್ರೀ ಎನ್. ನಂಜೇಗೌಡ.—ಮೈನರ್ ಇರಿಗೇಷನ್ನಿಗೆ ಹೆಚ್ಚು ಪ್ರಾಶಸ್ತ್ಯ ಕೊಡುತ್ತೇವೆಂದು ಆಗಾಗ್ಗೆ ಭಾಷಣವನ್ನು ಮಾಡುತ್ತಿರುತ್ತೀರಿ, ಆದರೆ ಆ ರೀತಿ ಅದಕ್ಕೆ ಪ್ರಾಶಸ್ತ್ಯವನ್ನು ಕೊಡದೆ ಆ ಕೆಲಸ ಫೆಲ್ಯೂರ್ ಆಗಿದೆ ಎಂದು ಹೇಳಿದರೆ ತಾವು ಒಪ್ಪಿಕೊಳ್ಳುತ್ತೀರಾ ?

ಶ್ರೀ ಆಲೂರು ಹನುಮಂತಪ್ಪ.—ಹಾಗೆ ಹೇಳುವುದಕ್ಕಾಗುವುದಿಲ್ಲ. ಮೈನರ್ ಇರಿಗೇಷನ್ನಿನಲ್ಲಿ ನಾವು ಅಧಿಕ ಕೆಲಸವನ್ನು ಮಾಡಿದ್ದೇವೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಇದುವರೆಗೂ ಮಾನ್ಯ ಉಪಮಂತ್ರಿಗಳು ಹೇಳಿದ್ದನ್ನೂ ನೋಡಿದರೆ ಹಣವೂ ಇಲ್ಲ ಕೆಲಸವೂ ಇಲ್ಲ ಎಂದು ಅರ್ಥವಾಯಿತು, ಹಾಗಿದ್ದಮೇಲೆ ಈ ಮೈನರ್ ಇರಿಗೇಷನ್ನಿಗೆ ಒಬ್ಬರು ಉಪಮಂತ್ರಿಗಳು ಬೇಕೆ ?

Mr. SPEAKER.—That is why I do not allow this Hon'ble Member to put questions.

Location of a Steel Plant at Hospet.

*Q.—333. Sri GANJI VEERAPPA (Harihar).—

Will the Government be pleased to state :—

(*a*) whether the Government of India have sent their team of Anglo-American experts to study and report on the question of Location of the Steel Plant at Hospet ;

(*b*) whether an earlier team of Government of India experts had reported that Hospet is the best suited place for the Location of the Steel Factory when compared to other places that are competing ;

(*c*) whether the State Government have decided to put up a Steel Plant at Hospet ?

A.—Sri K. MALLAPPA (Minister for Industries and Commerce).—

(*a*) No.
(*b*) No official report in this regard has been received.
(*c*) The question is under examination.

Sri GANJI VEERAPPA.—May I know whether the Government are aware that the Union Minister for Steel, Sri N. Sanjeeva Reddy, made a statement on the floor of the Lok Sabha that the technical opinion in regard to establishment of steel plant is in favour of Hospet ?

Sri K. MALLAPPA.—Hospet and Goa are tied up. There is no indication between the two which is going to be a better site. From the unofficial information that is available with me, it looks as though Hospet has got superiority over Goa.